ವ್ಯಾಟ್‌ನ ಸಾಧಕ – ಬಾಧಕ

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೩೬ (೧೪೬೬)

ಸದಸ್ಯರ ಹೆಸರು : ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ)

ಉತ್ತರಿಸುವವರು :

ಪ್ರಶ್ನೆ

ಅ) ಮೌಲ್ಯವರ್ಧಿತ ತೆರಿಗೆ ಪದ್ಧತಿ ರಾಜ್ಯಕ್ಕೆ ವರದಾನ ಆಗಿದೆಯೇ;

ಆ) ವ್ಯಾಟ್ ಜಾರಿಗೊಂಡಾಗಿನಿಂದ ಇರುವ ಗೊಂದಲಗಳನ್ನು ಸರ್ಕಾರ ಪ್ರಾಮಾಣಿಕವಾಗಿ ಏಕೆ ಬಗೆಹರಿಸುತ್ತಿಲ್ಲ ;

ಇ) ವ್ಯಾಟ್ ಅನುಷ್ಠಾನದ ಪ್ರೋತ್ಸಾಹಕ್ಕೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ನೆರವಿನ ಮೊತ್ತವೆಷ್ಟು ;

ಈ) ಬೇರೆ ಬೇರೆ ಹಂತದ ತೆರಿಗೆ ವ್ಯಾಪ್ತಿಯಡಿ (ವ್ಯಾಟ್) ಇರುವ ಸರಕುಗಳು ಯಾವುವು (ಅವುಗಳ ಪಟ್ಟಿ ನೀಡುವುದು) ;

ಉ) ತೆರಿಗೆ ಸಂಗ್ರಹದ ಹೆಚ್ಚಳದ ದೃಷ್ಟಿಯಿಂದ ಮತ್ತಷ್ಟು ಸರಕುಗಳನ್ನು ವ್ಯಾಟ್ ವ್ಯಾಪ್ತಿಗೆ ತರುವ ಯೋಜನೆ ಸರ್ಕಾರಕ್ಕಿದೆಯೇ ;

ಊ) ಇದರಿಂದ, ನಿರೀಕ್ಷಿಸಲಾದ ತೆರಿಗೆ ಮೊತ್ತವೆಷ್ಟು ;

ಉತ್ತರ

ಅ) ಹೌದು

ಆ) ಬಗೆಹರಿಸಲಾಗಿದೆ.

ಇ) ದಿ:೦೧.೦೪.೨೦೦೫ ರಿಂದ ವ್ಯಾಟ್ ಕಾಯ್ದೆ ಜಾರಿಗೆ ಬಂದ ನಂತರ ಭಾರತ ಸರ್ಕಾರದಿಂದ ವ್ಯಾಟ್ ಜಾರಿಯಿಂದಾಗ ತೆರಿಗೆ ಆದಾಯ ನಷ್ಟದ ಬಗ್ಗೆ ರಾಜ್ಯಕ್ಕೆ ಮಂಜೂರಾದ ಪರಿಹಾರ ಮೊತ್ತ ಕೆಳಕಂಡಂತಿದೆ :

ವರ್ಷ	ಪರಿಹಾರ ಮೊತ್ತ
೨೦೦೫-೦೬	ರೂ. ೧,೨೭೨,೨೦ ಕೋಟಿ
೨೦೦೬-೦೭	ರೂ.೩೯೨.೦೮ ಕೋಟಿ
(೨೦೦೬-೦೭ ಏಪ್ರಿಲ್‌ನಿಂದ ನವಂಬರ್ ೨೦೦೬ರ ವರೆಗೆ)	
ಒಟ್ಟು	**ರೂ. ೧,೬೬೪.೨೮ ಕೋಟಿಗಳು**

ಈ) ಮೌಲ್ಯವರ್ಧಿತ ತೆರಿಗೆ ಕಾಯ್ದೆ ೨೦೦೩ರ ಶೆಡ್ಯೂಲ್ ಗಳಲ್ಲಿ ಶೇ. ೧, ಶೇ. ೪ ಹಾಗೂ ಶೇ. ೨೦ ರ ತೆರಿಗೆ ಇರುವ ಸರಕುಗಳ ವಿವರಗಳನ್ನು ವಿವರಿಸಲಾಗಿದೆ. ಸದರಿ ಶೆಡ್ಯೂಲ್‌ಗಳಲ್ಲಿ ಇಲ್ಲದ ಸರಕುಗಳ ಮೇಲೆ ಶೇ. ೧೨.೫ ರ ತೆರಿಗೆ ಇರುತ್ತದೆ.

ಉ) ಇಲ್ಲ

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ಹಂತದ ತೆರಿಗೆ ವ್ಯಾಪ್ತಿಯಡಿ (ವ್ಯಾಟ್) ಇರುವ ಸರಕುಗಳು ಯಾವುವು, ಅವುಗಳ ಪಟ್ಟಿ ಕೊಡಬೇಕೆಂದು ನಾನು ಕೇಳಿದ್ದೆ. ಅವರು ನೀಡಿರತಕ್ಕಂಥ ಉತ್ತರದಲ್ಲಿ ಅದರ ಪಟ್ಟಿ ಇಲ್ಲ. ಮೌಲ್ಯವರ್ಧಿತ ತೆರಿಗೆ ಕಾಯ್ದೆ ೨೦೦೩ರ ಶೆಡ್ಯೂಲ್ ಗಳಲ್ಲಿ ಶೇ.೧, ಶೇ. ೪ ಹಾಗೂ ಶೇ.೨೦ರ ತೆರಿಗೆ ಇರುವ ಸರಕುಗಳ ವಿವರಗಳನ್ನು ವಿವರಿಸಲಾಗಿದೆ. ಸದರಿ ಶೇಡ್ಯೂಲ್‌ಗಳಲ್ಲಿ ಇಲ್ಲದ ಸರಕುಗಳ ಮೇಲೆ ಶೇ. ೧೨.೫ರ ತೆರಿಗೆ ಇರುತ್ತದೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಪಟ್ಟಿಯನ್ನು ಒದಗಿಸಬೇಕೆಂದು ಕೇಳಲಾಗಿತು. ಆದರೆ, ಇದರ ಪಟ್ಟಿಯನ್ನು ಕೊಟ್ಟಿಲ್ಲ.

ಶ್ರೀ ರಾಮಚಂದ್ರಗೌಡ : (ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಎಷ್ಟು ಬರಬಹುದೆಂದು ಸರ್ಕಾರ ಅಂದಾಜು ಮಾಡಿರುತ್ತದೆ. ಮೌಲ್ಯವರ್ಧಿತ ತೆರಿಗೆಯಲ್ಲಿ ನಾವು ಅಂದಾಜು ಮಾಡಿರತಕ್ಕಂಥದರಲ್ಲಿ ಏನಾದರೂ ಕೊರತೆಯಾದಾಗ ಕೇಂದ್ರ ಸರ್ಕಾರ ಮೊದಲನೇ ವರ್ಷ ೧೦೦ಕ್ಕೆ ೧೦೦ರಷ್ಟು ಪರಿಹಾರವನ್ನು ಕೊಡುತ್ತದೆ. ಎರಡನೇ ವರ್ಷದಲ್ಲಿ ಮತ್ತೆ ನಮಗೆ ಏನಾದರು ಕೊರತೆಯಾದರೆ, ೧೦೦ಕ್ಕೆ ೭೫ರಷ್ಟು ಕೇಂದ್ರಸರ್ಕಾರ ಪರಿಹಾರವನ್ನು

ಒದಗಿಸಿಕೊಡುತ್ತದೆ. ಮೂರನೇ ವರ್ಷದಲ್ಲಿ ಪುನಃ ನಮಗೆ ಏನಾದರು ಕೊರತೆಯಾದರೆ, ಶೇಕಡ ೫೦ರಷ್ಟು ಪರಿಹಾರವನ್ನು ತುಂಬಿಕೊಡುತ್ತಾರೆ. ಆದರೆ, ನಮಗೆ ಮೊದಲನೇ ವರ್ಷದಲ್ಲಿ ಯಾವುದೇ ಕೊರತೆ ಬರಲಿಲ್ಲ. ಮೊದಲನೇ ವರ್ಷ ನಮಗೆ ತೆರಿಗೆ ಯಾವರೀತಿಯಾಗಿ ಕಲೆಕ್ಷನ್ ಆಯಿತೆಂದರೆ, ನಮ್ಮ ಅಪೇಕ್ಷೆಗೆ ಮೀರಿದಂಥ ಕಲೆಕ್ಷನ್ ಆಗಿದ್ದರಿಂದ ನಮಗೆ ಹೆಚ್ಚು ಕೊರತೆ ಬೀಳಲಿಲ್ಲ. ಆದರೆ, ಕೊರತೆ ಬಿದ್ದಂಥ ಸಂಪೂರ್ಣವಾದಂಥ ಹಣವನ್ನು ಕೊಟ್ಟಿದ್ದಾರೆ. ೨೦೦೫-೦೬ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಪರಿಹಾರ ಮೊತ್ತ ೧,೨೭,೨೦ ಕೋಟಿ ರೂಪಾಯಿ ಮತ್ತು ೨೦೦೬-೦೭ರಲ್ಲಿ ೩೯೨.೦೮ ಕೋಟಿ ರೂಪಾಯಿ ಹಾಗೂ ೨೦೦೬ ಏಪ್ರಿಲ್‌ನಿಂದ ನವೆಂಬರ್ ೨೦೦೬ರವರೆಗೆ ಒಟ್ಟು ೧,೬೬೪,೨೮ ಕೋಟಿ ರೂಪಾಯಿಗಳಷ್ಟು ಪರಿಹಾರ ಹಣ ಕೇಂದ್ರದಿಂದ ಬಂದಿದೆ. ಮತ್ತೆ ಮೌಲ್ಯವರ್ಧಿತ ತೆರಿಗೆ ಕಾಯ್ದೆ ೨೦೦೩ರ ಶೆಡ್ಯೂಲ್ ಗಳಲ್ಲಿ ಶೇ.೧, ಶೇ.೪ ಹಾಗ ಶೇ. ೨೦ರ ತೆರಿಗೆ ಇರುವ ಸರಕುಗಳ ವಿವರಗಳನ್ನು ವಿವರಿಸಲಾಗಿದೆ. ಸದರಿ ಶೆಡ್ಯೂಲ್‌ಗಳಲ್ಲಿ ಇಲ್ಲದ ಸರಕುಗಳ ಮೇಲೆ ಶೇ. ೧೨.೫ರ ತೆರಿಗೆ ಇರುತ್ತೆ. ಬಹುಶಃ ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದದೇವೆಂದು ನಾನು ಭಾವಿಸಿಕೊಡಂಡಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್ : ಬೇರೆ ಬೇರೆ ಹಂತದ ತೆರಿಗೆ ವ್ಯಾಪ್ತಿಯಡಿ (ವ್ಯಾಟ್) ಇರುವ ಸರಕುಗಳು ಯಾವುವು ? ಅವುಗಳ ಪಟ್ಟಿ ನೀಡುವುದೆಂದು ಕೇಳಿದ್ದೇನೆ. ಆದರೆ, ಸದರಿ ಪಟ್ಟಿಯನ್ನು ತಾವು ನೀಡಿಲ್ಲ. ಆದ್ದರಿಂದ ದರಿ ಪಟ್ಟಿಯನ್ನು ಕೊಡಲಾರದೆ ನಾವು ಹೇಗೆ ಮಾತನಾಡುವುದಕ್ಕೆ ಆಗುತ್ತದೆ? ತಾವು ಪಟ್ಟಿ ಒದಗಿಸಿಲ್ಲ.

ಶ್ರೀ ರಾಮಚಂದ್ರಗೌಡ : ತೆರಿಗೆ ಇರುವ ಸರಕುಗಳ ವಿವರಗಳು ಶೆಡ್ಯೂಲ್ ನಲ್ಲಿರುತ್ತದೆಂಬ ಕಾರಣದಿಂದ ನಾವು ಮಾಹಿತಿಗಳನ್ನು ನೀಡಿಲ್ಲ, ಅವಶ್ಯಕತೆ ಇದ್ದಲ್ಲಿ ಒದಗಿಸಲಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ ಅವರು ಮಾಹಿತಿಯನ್ನು ಕೇಳಿರುತ್ತಾರೆ. ದಿನಾಂಕ : ೧.೪.೨೦೦೫ರಿಂದ ವ್ಯಾಟ್ ಜಾರಿಗೆ ಬಂದಿದೆ. ಆಗ ಎರಡು ರೇಟ್ ಗಳನ್ನು introduce ಮಾಡಿರುತ್ತೇವೆ. ೪ ಮತ್ತು ೧೨.೫೦, ಅದು ಬಿಟ್ಟು special rate ನಲ್ಲಿ ಕೆಲವು ಇವೆ. Petrol, Diesel and Sugar

Cane ಇವೆ. ಕೆಲವೊಂದು exemption ಕೊಟ್ಟಿದ್ದೇವೆ. ಕೆಲವು ವ್ಯಾಪ್ತಿಗೆ ಳ ಬರುವುದಿಲ್ಲ, ೧೨.೫೦ ನೂ ಬರುವುದಿಲ್ಲ, ಯಾವುದು ಬರುವುದಿಲ್ಲ, ಅದನ್ನು ಕೊಟ್ಟಿರುತ್ತೇವೆ. ಅದರ ಪಟ್ಟಿಯನ್ನು ಅವರು ಕೇಳಿದರೆ, ಅವಶ್ಯಕತೆ ಬಿದ್ದರೆ ಕೊಡುತ್ತೇವೆಂದು ಸರ್ಕಾರ ಹೇಳಿದರೆ ಹೇಗೆ? ಅವರಿಗೆ ಈಗ ಅವಶ್ಯಕತೆ ಇದೆ ಕೊಡಿ.

ಶ್ರೀ ರಾಮಚಂದ್ರಗೌಡ (ಉಪ ಮುಖ್ಯ ಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಾನು ಕಳುಹಿಸಿ ಕೊಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ನಾನು ಉಪ ಪ್ರಶ್ನೆಯನ್ನು ಕೇಳಬೇಕು, ಇವರು ಈಗ ಅದನ್ನು ತರಿಸಿ ಕೊಡುತ್ತೇನೆಂದು ಹೇಳಿದರೆ ಹೇಗೆ ? ಸದನದಲ್ಲಿ ಅದನ್ನು ಹಾಜರು ಪಡಿಸಬೇಕು.

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು ಇಲ್ಲದಿರುವುದರಿಂದ ಅವರ ಪರವಾಗಿ ಇವರು ಉತ್ತರವನ್ನು ಹೇಳುತ್ತಿದ್ದಾರೆ. ಪೂರ್ಣ ಮಾಹಿತಿ ಅವರ ಹತ್ತಿರ ಇಲ್ಲ. ಆಯಿತು That is good, next question.

ಶ್ರೀ ವೈಜನಾಥ್ ಪಾಟೀಲ್ : ನನ್ನ ಉತ್ತರ ಏನಾಯಿತು ?

ಅಧ್ಯಕ್ಷರು : ನಿಮ್ಮ ಉಪ ಪ್ರಶ್ನೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಅಂಕಿ ಅಂಶಗಳನ್ನು ಕಳುಹಿಸಿ ಕೊಡುತ್ತಿದ್ದೇನೆಂದು ಹೇಳುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರು ಇಲ್ಲದಿರುವುದರಿಂದ ಮಾನ್ಯ ರಾಮಚಂದ್ರಗೌಡರು ಉತ್ತರವನ್ನು ಕೊಡುತ್ತಿದ್ದಾರೆ. ಅದನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಅವರು ಪ್ರಶ್ನೆ ಕೇಳುವುದಕ್ಕೆ ಅಂಕಿ ಅಂಶಗಳು ಬೇಕಲ್ಲವೆ?

ಶ್ರೀ ವೈಜನಾಥ್ ಪಾಟೀಲ್ : ಹೌಸ್‌ನಲ್ಲಿ ಇನ್ನು ಮುಂದೆ ಪ್ರಶ್ನೆ ಕೇಳುವ ಅವಶ್ಯಕತೆ ಏನು ಇದೆ. ಮುಂದೆ ಹಾಗೆ ಮಾಡಿಬಿಡಿ. ನಾವು ಪತ್ರವನ್ನು ಬರೆಯುತ್ತೇವೆ, ಆಗ ಅವರು ಉತ್ತರವನ್ನು ಬರೆಯುತ್ತಾರೆ. ಅವರು ಕಳುಹಿಸಿ ಕೊಡುತ್ತಾರೆಂದರೆ ಏನು ? ಇದರ ಬಗ್ಗೆ ಉತ್ತರ ಸಮರ್ಪವಾಗಿ ಇಲ್ಲ ಅದರ ಬಗ್ಗೆ ಏನು ಹೇಳುತ್ತಾರೆ.

ಅಧ್ಯಕ್ಷರು : ಕಳುಹಿಸಿ ಕೊಡುತ್ತೇನೆಂದು ಅವರು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರ ಪರವಾಗಿ ಉತ್ತರವನ್ನು ಕೊಡುತ್ತಿದ್ದಾರೆ, ಅವರ ಹತ್ತಿರ ಮಾಹಿತಿ ಇಲ್ಲ.

(ಗೊಂದಲ)

ಶ್ರೀ ವೈಜನಾಥ್ ಪಾಟೀಲ್ : ಈ ಅಸೆಂಬ್ಲಿ ಏಕೆ ಬೇಕು. ಈ ಅಧಿವೇಶನ ಏಕೆ ಬೇಕು. ಮಾನ್ಯ ಯಡಿಯೂರಪ್ಪನವರು ಬರಬೇಕಾಗಿಲ್ಲ, ಇದರಲ್ಲಿಯೆ ಉತ್ತರವನ್ನು ಕೊಡಬಹುದಾಗಿತ್ತು.

ಅಧ್ಯಕ್ಷರು : ಅವರ ಹತ್ತಿರ ಮಾಹಿತಿ ಇಲ್ಲ. ಸಂಬಂಧಪಟ್ಟ ಸಚಿವರು ಇಲ್ಲ.

ಶ್ರೀ ವೈಜನಾಥ್ ಪಾಟೀಲ್ : ಸರ್ಕಾರ ಇಲ್ಲವೆ ? ಮಾಹಿತಿ ಇಲ್ಲವೆಂದರೆ ನಾಳೆ ಕೊಡುತ್ತೀರಾ? ಮತ್ತೆ ಯಾವಾಗ ಕೊಡುತ್ತೀರಿ, ಇದನ್ನು ಹೌಸ್ ನಲ್ಲಿ ಕೊಡಬೇಕು. ಇದು ಚರ್ಚಿಸುವ ವಿಷಯ ಇದೆ. ಇದು ಸದನದಲ್ಲಿ ಉತ್ತರಿಸುವ ಪ್ರಶ್ನೆ ಇದೆ. ಇದು private ನಲ್ಲಿ ಮಾಡುವುದು ಅಲ್ಲ.

ಅಧ್ಯಕ್ಷರು : ಆಯಿತು, ಬಿ.ಕೆ. ಸಂಗಮೇಶ್ವರವರು, ಇಲ್ಲವೆ ?

ಏತ ನೀರಾವರಿ ಸೌಲಭ್ಯ

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೩೮ (೧೪೬೮)

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಿ)

ಉತ್ತರಿಸುವವರು :

ಪ್ರಶ್ನೆ

ಅ) ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಸದಲಗಾ ಮತ ಕ್ಷೇತ್ರ ವ್ಯಾಪ್ತಿಯ ಮಲ್ಲಿಕವಾಡ ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಏತ ನೀರಾವರಿ ಯೋಜನೆ ಸಂಪೂರ್ಣಗೊಂಡಿದೆಯೇ;